# ಸಿದ್ಧಗಂಗಾ

ಸಂಪುಟ-28. ಸಂಚಿಕೆ-9. ಸೆಪ್ಟೆಂಬರ್-1992.

## —: ಶಿಕ್ಷಕರ ದಿನಾಚರಣೆ ಸಂದೇಶ :—

ಇಂದಿನ ಶಿಕ್ಷಣದ ಗುಣಮಟ್ಟ ಸಂಪೂರ್ಣವಾಗಿ ಶಿಕ್ಷಕರ ಗುಣಧರ್ಮವನ್ನು ಅವಲಂಬಿಸಿದೆ. ಅವರು ವೃತ್ತಿ ಬೆಳವಣಿಗೆಯ ಬಗ್ಗೆ ಸದಾ ಜಾಗೃತರಾಗಿರಬೇಕು. ಉನ್ನತವಾದ ಮೌಲ್ಯಗಳಕಡೆ ವಿದ್ಯಾರ್ಥಿಗಳನ್ನು ಆಕರ್ಷಿಸಲು ನೆರವಾಗಬೇಕಾದರೆ ವ್ಯಕ್ತಿತ್ವದ ಪ್ರಭಾವ ಮತ್ತು ಒಳ್ಳೆಯ ಸಂಸ್ಕೃತಿಯನ್ನು ಸಾಧನವನ್ನಾಗಿ ಪ್ರಯೋಗಿಸಬೇಕು.

ಮಾನವೀಯ ಮೌಲ್ಯಗಳು ಭ್ರಷ್ಟತೆಯಿಂದ ಇಂದು ನಾಶವಾಗುತ್ತಿವೆ. ಇವನ್ನು ಉಳಿಸಿ ಬೆಳೆಸಿ ಸಮಾಜವನ್ನು ರಕ್ಷಣೆ ಮಾಡುವ ಶಕ್ತಿ–ಸಾಮರ್ಥ್ಯ ಶಿಕ್ಷಕರಿಗೆ ಇದೆ. ಉತ್ತಮ ಅಧ್ಯಾಪಕರು ಇಂದಿನ ಸಮಾಜಕ್ಕೆ ಅಗತ್ಯ ಮತ್ತು ಸರ್ವಶ್ರೇಷ್ಠ. ತಮ್ಮ ಜವಾಬ್ದಾರಿಯನ್ನು ಇನ್ನೊಬ್ಬರ ಮೇಲೆ ವರ್ಗಾಯಿಸುವುದನ್ನು ಕಡಿಮೆ ಮಾಡಬೇಕು.

ಆಡಂಬರ ಪ್ರವೃತ್ತಿ ತೊರೆದು ಮಕ್ಕಳ ಭವಿಷ್ಯ "ಜೀವನ ಜ್ಯೋತಿ" ಪ್ರಜ್ವಲಿಸುವಂತೆ ಮಾಡಲು ಶಿಕ್ಷಕ ವರ್ಗ ಚಿಂತನ ಮಾಡುತ್ತಿರಬೇಕು.

—ಶ್ರೀ ಶ್ರೀ ಶಿವಕುಮಾರಸ್ವಾಮಿಗಳು.

ಪ್ರಕಾಶಕರು:
ಹಳೆಯ ವಿದ್ಯಾರ್ಥಿಗಳ ಸಂಘ.
ಸಿದ್ಧಗಂಗಾ ಕ್ಷೇತ್ರ.

# ನಿಜವನರಿದ ನಿಜಗುಣ ಶಿವಯೋಗಿ

ಸಿದ್ಧಯ್ಯ ಪುರಾಣಿಕ, ಶ್ರೀ ಗಿರಿ, 4/5ಎ, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560052.

**ನಿರೂಪಕ:**– ನೂರಾರು ವರ್ಷಗಳಹಿಂದೆ ಹದಿಮೂರು ಹದಿನೈದನೆಯ ಶತಮಾನಗಳ ಮಧ್ಯದಲ್ಲಿ ಎಂದೋ ಒಮ್ಮೆ - ಕೊಳ್ಳೇಗಾಲ ತಾಲ್ಲೂಕಿನಲ್ಲಿರುವ ಶಂಭುಲಿಂಗನ ಬೆಟ್ಟದ ಮೆಟ್ಟಲುಗಳನ್ನೇರುತ್ತಲಿದ್ದ ಭವ್ಯಾತ್ಮನೊಬ್ಬ, ಅವನ ಪಾದಗಳು ಮೆಟ್ಟಲುಗಳನ್ನೇರುತ್ತಿದ್ದಂತೆ ಅವನ ಮಸ್ತಕದಲ್ಲಿ ಪಲ್ಲವಿಯೊಂದು ಪ್ರತಿಧ್ವನಿಸುತ್ತಲಿದ್ದಿತು-ಆರು ನಾನೆಂದು ವಿಚಾರಿಸು, ಆರು ನಾನೆಂದು ವಿಚಾರಿಸಿ ತಿಳಿಯೆ ಸಂಸಾರ ಸಾಗರವನು ತ್ತರಿಪುದರಿದೇ. ?

ಏಕೆ ಸಂಸಾರದಲ್ಲಿ ವಿರತಿ ಹುಟ್ಟಿತು ಈ ವ್ಯಕ್ತಿಗೆ ? 'ಭವನಮಾಲೆಗಳಿಸು' ಎಂಬ ಶ್ರೀಗುರು ವಚನೋಪದೇಶವನಾಲಿಸಿಯೆ ? ತನುಮೋಹವಖಿಳೇಂದ್ರಿಯದ ಪರಿತಾಪ, ಧನದಾಸೆ ಸುಜನರ ನಿಂದೆಯಾಲಾಪ, ವನಿತಾಭಿರತಿ ಲೋಕಗತಿಯನು ಲೇಪಗಳು ಸಾಕಾಗಿಯೇ ? ಇಲ್ಲಿ ಕೇಳಿ:

**ಗಾಯಕ** ರಾಗ–ರೇಗುಪ್ತಿ

ನಿದ್ರೆ ಬಾರದಿದೆಯೆನ್ನ ಪರಿಭವ ದು:ಖದ 1 ಮುದ್ರವೆನಿಸುವ ಸಾಯಸವ ನೆನೆ ನೆನೆದು ॥1ಪು ಶಿ॥
ಪಾಪಾನುಗುಣದಿಂದೆ ಗಿಡಮರ ಕ್ರಿಮಿಗಳ
ರೂಪಾಗಿಗಿಕೀಟಕ ಪತಂಗಾದಿಯಾಗಿ
ಆ ಪಕ್ಷಿ ಕುಲವಾಗಿ ಮೃಗಜಾತಿಯಾಗಿ ಮೇ—
ಲಾಪಶುರೂಪಾಗಿ ಬಹುಬಾಧೆಗೇಳಿ ॥ ನಿದ್ರೆ ಬಾರದಿದೆ....
ಭೂತ ಪಂಚಕದ ರೂಪಾಗಿ ಔಷಧಿಯಾಗಿ
ಧಾತು ಸಪ್ತಕದ ರೂಪಾಗಿ ತಂದೆಯೊಳು
ಮಾತೆಯ ಸೂತಕ ರುಧಿರರರೂಪಾಗಿ ಮ—
ತ್ತೀತನುವಾಗು ವಚ್ಚರಿಯನು ಕೇಳಿ —ನಿದ್ರೆ ಬಾರದಿದೆ—
ಬಾಲಕ ತರುಣ ಜಿರಾಜೀರ್ಣರೂಪಾಗಿ
ಮೇಲೆ ಸರರೆಯಾಗಿ ಬಳಿಕೇ ಕ್ರಮದೊಳು
ತಾಳಲಾರೆನು ತನುವ ಶಂಭುಲಿಂಗವೆ
ಪಾಲಿಸೆಂದೆರಗಿ ಬಿನ್ನೈವ ಭೀತಿಯೊಳು —ನಿದ್ರಾ ಬಾರದಿದೆ.

**ನಿರೂಪಕ:**— ನಿದ್ರೆ ಬಾರದಾಗಿ ಎದ್ದು ಹೊರಬಿದ್ದು ಬಂದಹಾಗಿದೆ ಇವನು ಬುದ್ಧನಂತೆ. ಶಂಭುಲಿಂಗನ ಬೆಟ್ಟದ ಸ್ವಯಂಭು ಸೌಂದರ್ಯಶ್ರೀಯ ಸಾನ್ನಿಧ್ಯದಲ್ಲಿ

ಶಾಂತಿ ದೊರೆಯಬಹುದೆಂದು, ಗುರು ಶಂಭುಲಿಂಗನ ಕರುಣದಿಂದ ನಿಜದರಿವು ದೊರೆಯಬಹುದೆಂದು ದೊರೆತನವನ್ನು ತೊರೆದು ಬಂದಂತಿದೆ ಈ ಜ್ಞಾನೋಪಾಸಕ ಸತ್ಯ ಸಾಧಕ,? ಇನ್ನಾವ ಪದವಿಯನ್ನೂ ಪಡೆಯಲೆಂದು ಬಂದಿರಲಾರ. ಅವನ ಈ ಹಾಡು ಇದಕ್ಕೆ ಸಾಕ್ಷಿ:—

**ಗಾಯಕ** **ರಾಗ—ಕಲ್ಯಾಣ**

ಬೇರೊಂದು ಪದವಿಯನು ಪಡೆವೆನೆಂಬಳಿಯಾಸೆ
ತೋರದೆನ್ನೊಳು ಗುರುವಿನೊಲುಮೆ ದೊರಕೊಳಲು ॥ಪ॥
ಶ್ರೀ ಗರುಪದಾಬ್ಜರೇಣು ಭಸಿತದೊಳೆನ್ನ ನಾ
ವಾಗಲೆಡೆವಿಡಿದ ಮಾಮಾಗ್ರಹಂ ತೊಲಗೆ
ನೀಗಿ ಜನನಾದಿ ವಿಕೃತಿಯನು ನಿಜಬೋಧರೂ-
ವಾಗಿ ಸಂತಸದೊಳಾನಿಹುಧನತಿಗಳೆದು—ಬೇರೊಂದು ಪದವಿಯನು
ಬೆಳಗುದೋರಲು ಗುರುದಯಾದಿವಾಕರನು

ನಿರೂಪಕ:— ಈ ಸುಗುಣ ಸಂತತಿ ಇವನದಾಗಿ 'ಶ್ರುತಿ ಬೋಧನೆಯೊಳು ಉಪರತಿಯಿಲ್ಲದ ಇರವು' ಇವನಿಗೆ ಅಳವಟ್ಟಿತು. ವೇದಾಗಮೋಪನಿಷತ್ತುಗಳ, ಪುರಾಣೇತಿಹಾಸಗಳ ಲೌಕಿಕ ಪಾರಲೌಕಿಕ ವಿದ್ಯೆ ವಿಜ್ಞಾನಗಳ ಸಾರಸರ್ವವನ್ನು ತನ್ನದಾಗಿಸಿಕೊಂಡು ಅದನ್ನು ಹಾಡುದಬ್ಬ, ತ್ರಿಪದಿ, ದ್ವಿಪದಿ, ಸಾಂಗತ್ಯ, ಕಂದ, ರಗಳೆ, ಗದ್ಯ ಮೊದಲಾದ ವಿವಿಧ ಛಂದೋರೂಪದಲ್ಲಿ, ಸಾಹಿತ್ಯ ಪ್ರಕಾರಗಳಲ್ಲಿ, ಸಹಜ ಸುಭಗ ಸುಂದರ ಶೈಲಿಯಲ್ಲಿ, ಸುಲಭ ಸುಲಲಿತ ಭಾಷೆಯಲ್ಲಿ ನಮಗಾಗಿ ನೀಡಿಹೋದ ಈ ಮಹಾಜ್ಞಾನಿ, ಮಹಾಯೋಗಿಯ ಹೆಸರು ನಿಜಗುಣಶಿವಯೋಗಿ —ನಿಜವನರಿದ, ನಿಜದಿ ಬರೆದ ನಿಜಗುಣಶಿವಯೋಗಿ. "ನಿಜ" ವೆಂಬ ಶಬ್ದ ನಿಜಗುಣಶಿವಯೋಗಿಗೆ ಅತ್ಯಂತ ಪ್ರಿಯವಾದ ಶಬ್ದ. ಅವರ ಗುರಿಗಮ್ಯವೇ, ಪಡೆದು, ಜಪಿಸಿ, ನೋಡಿ, ಕೇಳಿ, ನಿಜದೊಡಗೂಡಿ ಸುಖಿಸುವುದು. ನಿಜವನರಿದ, ನಿಜದಿ ಬೆರೆದ ಅವರಿಗೆ ನಿಜಗುಣ ಶಿವಯೋಗಿಯೆಂಬ ಹೆಸರು ಸಾರ್ಥಕ, ಅನ್ವರ್ಥಕ. ನಿಜವೆಂದರೇನು? ಅವರೇ ವಿವರಿಸಲಿ:-

**ಗಾಯಕ** **ರಾಗ—ದೇಶಿ**

ನಾವರಿದೆವರಿದೆವು ಎಂದರಿ ನಿಜವನು ಅದು ನಿಮ್ಮ
ಭಾವನೆಗೆ ಬಂದ ಪರಿಯನು ಪೇಳಿರೈ ॥ ಪ ॥
ದೇಹದಿರಿವಿನೊಳು ಸೋಜಿಗವೆನಿಸಿಹುದು ನಿಜವೊ ?
ದೇಹದೊಳಗೂಡಿ ನೋಡುವುದು ನಿಜವೊ ?
ದೇಹ ಕರಣಾದಿಗಳಿಗಾಧಾರವಾದಸು ನಿಜವೊ ?
ನಾನೆಂಬುದೆಡೆಬಿಡದೆ ಪೊರಗನರಿವುದು ನಿಜವೊ ?

ನಾನೆಂಬುದಡಗಿದಾನಂದ ನಿಜವೊ ?
ಆನಂದವನು ತೋರ್ಪುದೇನು ವಿಡಿದುದು ನಿಜವೊ ?
ಆನಂದವೆಂಬುದಡಗಿದ ನಿಲವೆ ನಿಜವೊ ?
ಸಗುಣ ನಿರ್ಗುಣ ತತ್ವ ತಾನೆ ನಿಜವೊ ?
ಸಗುಣ ನಿರ್ಗುಣವನಚ್ಚಳಿದ ಪದವದು ನಿಜವೊ ?
ಬಗೆಯ ಕುರುಪಿನ ಕಲಾಬಿಂದು ನಾದವೆ ನಿಜವೊ ?
ಬಗೆಯ ಬಣ್ಣಕೆ ಬಾರದಿಹುದೆ ನಿಜವೊ ?
ಜಗದ ನಾನಾತ್ಮದೊಡನಗಲದಿರ್ಪುದೆ ನಿಜವೊ ?
ಮಗುಳೆಯಾಜಗಕನ್ಯವಹುದು ನಿಜವೊ ?

ನಿರೂಪಕ :— ಇದಾವುದೂ ನಿಜವಲ್ಲ ನಿಜಗುಣರ ದೃಷ್ಟಿಯಲ್ಲಿ ನಿಜವಾವುದು ಹಾಗಾದರೆ ?

ಗಾಯಕ:- ಫಲವು ಮತಭೇದವಾದವನುಳಿದು, ಸಂಶಯದ
ಹೊಲಬೆಲ್ಲದಾನು ನೀನೆಂಬುದಳಿದು
ಸಲೆನೇನು ಸೀಮೆದೋರದ ಶಂಬುಲಿಂಗ
ವಾದುಳುಮೆ ಚಿನ್ಮಾತ್ರವದು ನಿಜ ಕಾಣಿರೈ.

ನಿರೂಪಕ:- ಎಲ್ಲ ಅಳಿದಮೇಲೂ ಉಳಿದ ಉಳುವೆಯೊಂದಿದೆ. ಅದೊಂದೇ ನಿಜ, ಅದನ್ನರಿಯುವದು ಅದರಲ್ಲಿ ಬೆರೆಯುವದು ಗುರಿಗಳಲ್ಲಿ ಗುರಿ ಅರಿವಿನ ದಾರಿಯಿಂದಲೇ ಈ ಗುರಿ ಮುಟ್ಟಬೇಕು. ಯಾಕೆ ? ಬೇರೆ ದಾರಿಗಳಿಲ್ಲವೇ ? ಇವೆ, ಆದರೆ ಅರಿವಿನ ದಾರಿಯ ಹಿರಿಮೆ ಹೀಗಿದೆ:—

ಗಾಯಕ ರಾಗ-ಭೈರವಿ
ತಿಳಿವುದೀಪದಿಯೊಳು ಮುಕುತಿದೊರೆವುದಂ-
ದೆಳಸಿ ನಿಗಮನಿಷ್ಠರೆನಿಪ ಯೋಗಿಗಳು
ಜ್ಞಾನದಿಂದೆ ಮರವೆಯಳಿವುದು, ಮರವೆಯ
ಹಾನಿಯಿಂದ ಭೇದಬುದ್ಧಿ ಕೆಡುವುದು, ಕೆಡಲು
ಹಾನೋಪದಾನುಳ್ಳ ವಿಷಯವದಿದೆಂಬ
ಮಾನಸ ವಿಕೃತಿ ಪೋಪುದು, ಪೋಗಲೊಡನೆ
ರಾಗ ವೈರಾಗದರಿವು ತೊಲಗಿ, ಮಾಡಲಹು-
ದಾಗದೆಂಬ ವಿಧಿನಾಶವದು, ನಾಶವೆನಿಸೆ
ಬೇಗ ಪುಣ್ಯಪಾಪ ಕರ್ಮ ವಿಲಯುವದು

ಪಿಂಗಲಾಗಿ ದೇಹಭಾವನಷ್ಟವದರ ಸಪ್ಪದೊಳು
ಮತ್ತೆ ಸಂಸೃತಿಗೆ ನಿರಾಕರಣವಹುದು, ಮೇ-
ಲುತ್ತಮ ಸಹಜವೆನಿಪಾವಸ್ಥೆ, ಬಳಿಕಾ
ಬಿತ್ತರಿಸಲರಿದಾಡ ಸುಖವೆ ನಲೆನೆಲ-
ಸಿತ್ತದೀಗ ಶುಂಭುಲಿಂಗವಾಗಿ ತಾನಿರ್ಪಿರವು ॥

ನಿರೂಪಕ:- ಆದುದರಿಂದ, ನಂಬು ಜ್ಞಾನವನೆ, ಕರ್ಮವೆಂಬ ಜಾಲದೊಳು ಸಿಲ್ಕಿ ಹಂಬಲಿಸದಿರು....ಎಂದರೆ ಎಲ್ಲ ಬಿಟ್ಟು ಜ್ಞಾನೋಪಾಸನೆ ಮಾಡುತ್ತ ಕುಳಿತುಬಿಡುವುದೆ? ಇಲ್ಲ, ಅಲ್ಲ, ತನವು ದಂಡಿಸಬೇಡ, ಮನವ ನಿಲ್ಲಿಸಬೇಡ, ಧನವ ನೀಗಿರಬೇಡ, ಮನೆ ಮಾರುತೊರೆದು ವನವಾಸಬೇಡ, ನಿನಗಿನಿತು ತತ್ತ್ವಜ್ಞಾನ ಸಂಜನಿಸಲಕವೆಲ್ಲವನು ಕೆಡಿಪುದರಿಂದೆ, ಇನಿಸು ತತ್ತ್ವಜ್ಞಾನ ಸಾಕು. ಅದನ್ನು ಗಳಿಸಲು ಲೌಕಿಕವನ್ನು ಬಿಡಬೇಕಿಲ್ಲ. ಲೌಕಿಕ ಪಾರಮಾರ್ಥಗಳನ್ನು ಕೂಡಿ ನಡಸುವವನೇ ಜಾಣನು.

ಗಾಯಕ ರಾಗ-ದೇಶಿ

ಜಾಣನು ಲೌಕಿಕ ಪಾರಮಾರ್ಥವೆರಡನು
ಪೂಣದೆ ಕೂಡ ನಡಸುತಿಹನಿಂತು ॥
ತರುಣಿಯ ಮೊಲೆಯೊಂದನುಣುತಲಣುಗನನ್ಯ
ಕರದೊಳುಳಿದ ಕುಚಾಗ್ರವನೋವುವಂತೆ
ನರಜನ್ಮವಿಡಿದಿಹ ಭೋಗಾನುಭವದೊಳು
ಪರಲೋಕಗತಿಯ ಸಾಧನದೊಳಿರಾಂದಿಹನು ॥
ಜಳವನು ಮಿಕ್ಕ ಮೆಯೊಳು ಕಾಣ್ಬನಂತೆ
ತಿಳಿವಿನ ಸುಖವನು ವಿಷಯಬಾಧೆಯನು ಸಂ-
ಗೊಳಿಸುವಂತೆ ಸಮಯವೊಂದರೊಳೈಯ್ದುತಿಹನು ॥
ಪರನ ಸಂಗದ ಸೊಗಪನು ಮರೆಯದೆ ನಿಜ
ಪುರುಷನೊಳೊಂದುವ ಪುಂಶ್ಚಲಿಯಂತೆ
ಗುರುಶಂಭುಲಿಂಗದ ನೆನಹು ನೆಲಸಿ ಬಾಹ್ಯ
ಪರಿಕರದಭಿರತಿಯನು ನಿಂಗದಿಹನು ॥

ನಿರೂಪಕ:- ಹೀಗೆ, 'ಪರಮ ವಿವೇಕಿಗಳೊಲಿದೊಡಂಬಡುವಂತೆ, ಪರತತ್ತ್ವ ಬೋಧೆಯ ಮೃತದ ಸರಿಸುರಿವಂತೆ, ಕೇಳ್ವರ ಕರ್ಣದೊಳು ಇದನೊರೆವೆ ನಾನು ಪನಿಷನ್ಮತದಿಂದ' ಎಂದು ಅವರೇ ತಮ್ಮ "ಪರಮಾನುಭವ ಬೋಧೆ"ಯಲ್ಲಿ ಹೇಳಿರುಪಂತೆ ಕೇಳ್ವರ ಕರ್ಣಗಳಲ್ಲಿ ಪರತತ್ವ ಬೋಧೆಯ ಅಮೃತದ ಸರಿ ಸುರಿಯುವ ಹಾಗೆ ಕೃತಿಗಳನ್ನು ರಚಿಸ ತೊಡಗಿದರು ನಿಜಗುಣರು. ಉಪನಿಷನ್ಮತದ ತಿರುಳಾದ "ಪರಮಾನುಭವ ಬೋಧೆ" ಯೋಗವಾಶಿಷ್ಠಾದಿಗಳಲ್ಲಿ ಹೇಳಿದ ತತ್ತ್ವಾರ್ಥದ ತಿರುಳಾದ ಪರಮಾರ್ಥಗೀತೆ" "ವೇದಾಂತದೊಳು ಗೋಪ್ಯವಾದರ್ಥವಂ ತ್ರಿವಿಧಿ" ಗೊಳಿಸಿರುವ 'ಅನುಭವಸಾರ' ಯೊಗಶಾಸ್ತ್ರದ ಸಾರಸಂಗ್ರಹದಂತಿರುವ ಪಾರಮಾರ್ಥ ಪ್ರಕಾಶಿಕೆ, ಕನ್ನಡದ ಮೊದಲನೆಯ ಮತಾತೀತವಾದ ಸಕಲಜ್ಞಾನಕೋಶವೆನಿಸಿರುವ 'ವಿವೇಕಚಿಂತಾಮಣಿ' ಹೃದಯಂಗಮವಾದ ಹಾಡುಗಬ್ಬಗಳ ಸಂಕಲನವಾದ 'ಕೈವಲ್ಯಪದ್ಧತಿ' 'ಅರವತ್ತು ಮೂರು ಪುರಾತನರ ತ್ರಿವಿಧಿ' ಈ ಏಳು ಕನ್ನಡ ಕೃತಿಗಸನ್ನಲ್ಲದೆ, 'ಅತ್ಮತರ್ಕ ಚಿಂತಾಮಣಿ' ಮತ್ತು 'ದರ್ಶನಸಾರಂ' ಎಂಬೆರಡು ಸಂಸ್ಕೃತ ಕೃತಿಗಳನ್ನೂ ರಚಿಸಿದ್ದಾರೆ ನಿಜಗುಣರು. ಆದರೆ ಅವರ ಈ ಎರಡೂ ಸಂಸ್ಕೃತ ಕೃತಿಗಳೂ ನಮ್ಮ ಪಾಲಿಗೆ ಇಲ್ಲವಾಗಿರುವುದು ವಿಷಾದದ ಸಂಗತಿ. ಈ ಎರಡು ಕೃತಿಗಳಲ್ಲಿ ಇನ್ನೆಷ್ಟು ಜ್ಞಾನರಾಶಿಯನ್ನು ಸೂರೆಮಾಡಿದ್ದರೋ ನಿರುಪಮಜ್ಞಾನಿ ನಿಜಗುಣ ಶಿವಯೋಗಿಗಳು, ಈ ಜ್ಞಾನರಾಶಿ ಸುಲಭವಾಗಿ ಪಡೆದದಲ್ಲ. ತ್ರಿವಿಧ ತಪಸ್ಸು ಮಾಡಿ ಪಡೆದುದು ಎಂಥ ತಪಸ್ಸು ? ಅವರೇ ಹೇಳಲಿ. ○

